ಕರ್ನಾಟಕ ಸರ್ಕಾರ

ಸಂ. ಗ್ರಾಅಪ 852 ಗ್ರಾಪಂಅ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 22.10.2019

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿ ಶಾಲಾ ಲಸಿಕಾ ಅಭಿಯಾನ ಮತ್ತು ತೀವ್ರತರವಾದ ಇಂದ್ರಧನುಷ್ ಅಭಿಯಾನ 2.0 ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ.

---

ರಾಜ್ಯದಲ್ಲಿ ಡಿಫ್ತೀರಿಯಾ ಪ್ರಕರಣಗಳು (ಗಂಟಲು ಮಾರಿ) ಹೆಚ್ಚಾಗಿ ಕಂಡುಬರುತ್ತಿದ್ದು, ಈಗಾಗಲೇ 400ಕ್ಕೂ ಹೆಚ್ಚು ಶಂಕಿತ ಡಿಫ್ತೀರಿಯಾ ಪ್ರಕರಣಗಳು ವರದಿಯಾಗಿವೆ. ಈ ಪ್ರಕರಣಗಳು ಬರದಂತೆ / ಹೆಚ್ಚಾಗದಂತೆ ತುರ್ತಾಗಿ ಅಭಿಯಾನದ ರೂಪದಲ್ಲಿ ಕ್ರಮ ಕೈಗೊಳ್ಳಬೇಕಾಗಿದ್ದು, 11ನೇ ಡಿಸೆಂಬರ್ 2019 ರಿಂದ 31ನೇ ಡಿಸೆಂಬರ್ 2019 ರವರೆಗೆ ಶಾಲಾ ಲಸಿಕಾ ಅಭಿಯಾನವನ್ನು ಹಮ್ಮಿಕೊಳ್ಳಲು ತೀರ್ಮಾನಿಸಿದೆ ಹಾಗೂ 2ನೇ ಡಿಸೆಂಬರ್ 2019 ರಿಂದ ರಾಜ್ಯದಲ್ಲಿ ತೀವ್ರತರವಾದ ಇಂದ್ರಧನುಷ್ ಅಭಿಯಾನ 2.0ನ್ನು ಹಮ್ಮಿಕೊಳ್ಳಲು ಭಾರತ ಸರ್ಕಾರವು ತಿಳಿಸಿರುತ್ತದೆ.

ಆದುದರಿಂದ, ರಾಜ್ಯದಲ್ಲಿ ಶಾಲಾ ಲಸಿಕಾ ಅಭಿಯಾನ ಮತ್ತು ತೀವ್ರತರವಾದ ಇಂದ್ರಧನುಷ್ ಅಭಿಯಾನ 2.0 ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ನಡೆಸುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

- ಡಿಫ್ತೀರಿಯಾ ಲಸಿಕಾ ಅಭಿಯಾನದ ಬಗ್ಗೆ ಜಿಲ್ಲೆಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಮಾಹಿತಿ ನೀಡುವುದು ಮತ್ತು ಅದನ್ನು ಜಾರಿಗೊಳಿಸುವ ಬಗ್ಗೆ ಸಲಹೆ ನೀಡುವುದು.
- ಜಿಲ್ಲೆ / ತಾಲ್ಲೂಕು / ಗ್ರಾಮ ಪಂಚಾಯಿತಿಗಳನ್ನು ಅಭಿಯಾನಕ್ಕೆ ಒಳಪಡಿಸುವುದು.
- ಎಲ್ಲಾ ತಂದೆ ತಾಯಿಗಳಿಗೆ ಅಭಿಯಾನದ ಬಗ್ಗೆ ಮಾಹಿತಿ/ಅರಿವು ನೀಡಲು ಸಹಕಾರ ನೀಡುವುದು.
- ಅಭಿಯಾನವನ್ನು ಎಲ್ಲಾ ಹಂತದಲ್ಲೂ ಮೇಲ್ವಿಚಾರಣೆ ಮೂಲಕ ಜಾರಿಗೊಳಿಸುವ ಸಂಬಂಧ ಕ್ರಮ ವಹಿಸುವುದು.
- ಅಭಿಯಾನದ ಸಂದರ್ಭದಲ್ಲಿ ಲಸಿಕಾ ಬೂತ್‌ಗಳನ್ನು ನಡೆಸುವುದಕ್ಕೆ ಸಹಕಾರ ನೀಡುವುದು.
- ರೋಗ ನಿರೋಧಕ ಪ್ರಾಮುಖ್ಯತೆಯ ಅರಿವು ನೀಡಲು ಸಮುದಾಯ ಸಭೆಗಳನ್ನು ನಡೆಸುವುದು.
- ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಸಂವಹನ ತಂತ್ರಗಳನ್ನು ರೂಪಿಸುವಲ್ಲಿ ಪೂರ್ವಭಾವಿಯಾಗಿ ಒಳಗೊಳ್ಳುವುದು.

..2

- ಫಲಾನುಭವಿಗಳನ್ನು ಸೇರಿಸುವಲ್ಲಿ ಸಹಕಾರ ಮತ್ತು ಅದಕ್ಕೆ ವಿರೋಧ ತೋರಿಸುವ ಕುಟುಂಬಗಳಿಗೆ ಮನವೊಲಿಸುವುದು.
- ಗ್ರಾಮ ಸಭೆ ಮತ್ತು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ರೋಗ ನಿರೋಧಕ ಕಾರ್ಯಕ್ರಮಗಳ ಬಗ್ಗೆ ಪುನರಾವಲೋಕಿಸುವುದು.

ಮೇಲ್ಕಂಡಂತೆ ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ.

Narayana D.G.
22/10/19

(ಡಿ.ಜಿ. ನಾರಾಯಣ)
ಉಪ ನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಗ್ರಾ.ಪಂ) (ಪ್ರ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.
4. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀನಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
5. ವೆಬ್‌ಸೈಟ್
6. ಶಾರಕ/ಹೆಪ್ರ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾ.ಅ&ಪಂ.ರಾಜ್ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.